# ಕಥಾಪ್ರಭ

## ಧ್ರುವನ ವ್ಯಾಕುಲತೆ

### ಧ್ರುವನ ದುಃಖ

**ಮ**ನುವಂಶದ ರಾಜನಾದ ಉತ್ತಾನಪಾದನಿಗೆ ತನ್ನ ಕಿರಿಯ ಪತ್ನಿಯಾದ ಸುರುಚಿಯ ಮೇಲೆ ವಿಶೇಷವಾದ ಪ್ರೇಮ. ಹಿರಿಯವಳಾದ ಸುನೀತಿಯನ್ನೂ ಅವಳ ಮಗ ಧ್ರುವನನ್ನೂ ಅವನು ಕಡೆಗಣಿಸಿದ್ದನು. ಒಂದು ದಿನ ಉತ್ತಾನಪಾದನು ಸಿಂಹಾಸನದ ಮೇಲೆ ಕುಳಿತಿದ್ದನು. ಅವನ ಪಕ್ಕ ಸುರುಚಿ ಕುಳಿತಿದ್ದಳು. ಧ್ರುವ ಪಿತೃಪ್ರೇಮದಿಂದ ತನ್ನ ತಂದೆಯ ತೊಡೆಯನ್ನೇರಲು ಯತ್ನಿಸಿದನು. ಅದನ್ನು ನೋಡಿದ ಸುರುಚಿಯ ಕಣ್ಣುಗಳು ಕೆಂಪೇರಿ, ಅವಳು ಹೇಳಿದಳು: "ನೋಡು, ರಾಜಸಿಂಹಾಸನದಲ್ಲಿ ಕುಳಿತುಕೊಳ್ಳುವ ಹಕ್ಕು ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಮಾತ್ರ. ನೀನು ತಪಸ್ಸು ಮಾಡಿ, ಶ್ರೀಮನ್ನಾರಾಯಣನನ್ನು ಆರಾಧಿಸಿ, ನನ್ನ ಗರ್ಭದಲ್ಲಿ ಬಂದು ಜನಿಸಬೇಕು, ತಿಳಿಯಿತೇ?"

ಈ ಮಾತುಗಳನ್ನು ಕೇಳಿದ ಧ್ರುವನು ತಾಯಿಯ ಬಳಿ ಹೋಗಿ, ಬಿಕ್ಕಿ ಬಿಕ್ಕಿ ಅಳಲಾರಂಭಿಸಿದನು. ಸುರುಚಿಯ ಮಾತುಗಳ ಬಗ್ಗೆ ಕೇಳಿತಿಳಿದ ಸುನೀತಿಗೂ ದುಃಖವಾಯಿತು. ಅವಳೂ ರೋದಿಸತೊಡಗಿದಳು. ಅವಳು ತನ್ನ ಮಗನಿಗೆ ಹೇಳಿದಳು: "ಮಗು! ನೀನು ಇನ್ನೊಬ್ಬರಿಗೆ ಕೇಡನ್ನು ಬಯಸಬೇಡ. ಇತರರಿಗೆ ಕೇಡನ್ನು ಬಯಸುವ ಮನುಷ್ಯನು ತಾನೇ ಕೇಡಿಗೆ ಈಡಾಗುವನು. ವತ್ಸ, ಸುರುಚಿ ಹೇಳಿದ್ದು ಸರಿಯಾಗಿಯೇ ಇದೆ. ದ್ವೇಷಭಾವವನ್ನು ಬಿಟ್ಟು ಅವಳು ಹೇಳಿದಂತೆಯೇ ಮಾಡು. ಶ್ರೀಹರಿಯ ಪಾದಪದ್ಮಗಳನ್ನು ಆರಾಧಿಸು. ಕಂದ, ನಿನ್ನ ದುಃಖವನ್ನು ದೂರಮಾಡಲು, ಅವನನ್ನು ಬಿಟ್ಟು ಬೇರೆ ಯಾರೂ ನನಗೆ ತೋರುತ್ತಿಲ್ಲ."

ಈ ಮಾತುಗಳನ್ನು ಕೇಳಿದ ಧ್ರುವನು ಸಮಾಧಾನ ಹೊಂದಿದನು. ಒಡನೆಯೇ ಕಾಡಿನ ಮಾರ್ಗವನ್ನು ಹಿಡಿದನು. ಮಾರ್ಗಮಧ್ಯದಲ್ಲಿ, ನಾರದರು ಎದುರಾದರು. "ಭಗವಂತನನ್ನು ಒಲಿಸಿಕೊಳ್ಳುವುದು ಸಾಮಾನ್ಯ ಮನುಷ್ಯರಿಗೆ ಅತ್ಯಂತ ಕಷ್ಟವೇ ಸರಿ. ಆದ್ದರಿಂದ ವ್ಯರ್ಥವಾದ ಈ ಹಠವನ್ನು ಬಿಟ್ಟು ಮನೆಗೆ ಹಿಂತಿರುಗು" ಎಂದರು. ಅದಕ್ಕೆ ಧ್ರುವನು ಹೀಗೆ ಹೇಳಿದನು: "ಪೂಜ್ಯರೇ, ಸುರುಚಿಯ ಕೆಟ್ಟಮಾತುಗಳಿಂದ ನನ್ನ ಮನಸ್ಸು ಅಶಾಂತವಾಗಿದೆ. ಆದ್ದರಿಂದ ತಮ್ಮ ಶಾಂತಿಯ ಉಪದೇಶವು ನನ್ನ ಮನಸ್ಸಿನಲ್ಲಿ ಪ್ರವೇಶಿಸುತ್ತಿಲ್ಲ. ನಮ್ಮ ವಂಶದಲ್ಲಿ ಯಾರೂ ಹೊಂದದ ಉನ್ನತ ಪದವಿಯನ್ನು ಗೆಲ್ಲುವ ಸಂಕಲ್ಪ ನನ್ನದು. ಅದಕ್ಕಾಗಿ ಯಾವುದು ಒಳ್ಳೆಯ ಹಾದಿ ಎನ್ನುವುದನ್ನು ತಿಳಿಸಿರಿ."

### ಸಾಧನೆಯ ಹಾದಿಯಲ್ಲಿ

ಧ್ರುವನ ದೃಢಚಿತ್ತವನ್ನು ಕಂಡು ಪ್ರಸನ್ನರಾದ ನಾರದ ಮಹರ್ಷಿಗಳು ಕರುಣೆತುಂಬಿ ಹೇಳಿದರು: "ಮಗು, ನಿನ್ನ ತಾಯಿ ತೋರಿದ ಮಾರ್ಗವೇ ನಿನಗೆ ಶ್ರೇಯಸ್ಕರವಾದುದು. ಏಕಾಗ್ರಚಿತ್ತದಿಂದ ಭಗವಂತನಾದ ಶ್ರೀವಾಸುದೇವನನ್ನೇ ಭಜಿಸು. ಅದಕ್ಕಾಗಿ ನೀನು ಯಮುನಾನದಿಯ ದಡದಲ್ಲಿರುವ ಪರಮ ಪಾವನವಾದ ಮಧುವನಕ್ಕೆ ಹೋಗು. ಅಲ್ಲಿ ತ್ರಿಕಾಲದಲ್ಲಿ ನದೀ ಸ್ನಾನ ಮಾಡುತ್ತ ಯಥಾವಿಧಿಯಾಗಿ ಕುಳಿತುಕೊಂಡು, ಪ್ರಾಣಾಯಾಮದ ಮೂಲಕ ಕಲ್ಮಷಗಳನ್ನು ಕಳೆದುಹಾಕಿ, ಪರಮಗುರುವಾದ ಪರಮಾತ್ಮನ ಧ್ಯಾನವನ್ನು ಮಾಡು. ಅವನದು ಅತ್ಯಂತ ಸುಂದರತಮವಾಗಿರುವ ಶ್ರೀಮೂರ್ತಿ. ಅವನು ಭಕ್ತರಿಗೆ ಆಶ್ರಯದಾತನು. ಪರಮಸುಖಕರನು. ಶರಣಾಗತವತ್ಸಲನು. ಅವನದು ಆನಂದಗೊಳಿಸುವ ದಿವ್ಯಮಂಗಳ ವಿಗ್ರಹ. ಹೀಗೆ ಅಂದುಕೊಂಡು ಮನಸ್ಸಿನಲ್ಲಿ ಧಾರಣೆ ಮಾಡು. ಇದರಿಂದ ಮನಸ್ಸು ಸ್ಥಿರವೂ ಏಕಾಗ್ರವೂ ಆಗುತ್ತದೆ. ತದನಂತರ, 'ವರಪ್ರದನಾದ ಪ್ರಭುವು ಕಿರುನಗೆಯನ್ನು ಸೂಸುತ್ತ, ಅನುರಾಗ ತುಂಬಿದ ನೋಟವನ್ನು ನನ್ನ ಮೇಲೆ ಬೀರುತ್ತಿದ್ದಾನೆ' ಎಂದುಕೊಂಡು ಮನಸ್ಸಿನೊಳಗೇ ಧ್ಯಾನ ಮಾಡು. ಇದರಿಂದ ಮನಸ್ಸು ಪರಮಾನಂದದಲ್ಲಿ ಲೀನವಾಗಿ ಹೋಗುವುದು. ಧ್ಯಾನಕ್ಕೆ ಸಹಾಯವಾಗುವಂತಹ **'ಓಂ ನಮೋ ಭಗವತೇ ವಾಸುದೇವಾಯ'** ಎಂಬ ಗುಹ್ಯವಾದ ಮಂತ್ರವನ್ನೂ ಜಪಿಸು. ಹೀಗೆ ಹೃದಯದಲ್ಲಿ ನೆಲೆಸಿರುವ ಹರಿಯನ್ನು ಮನಸ್ಸು, ಮಾತು ಮತ್ತು ಶರೀರಗಳಿಂದ ಭಕ್ತಿಪೂರ್ವಕವಾಗಿ ಭಜಿಸು. ಆಗ ಆತನು ನಿಶ್ಚಲಭಾವದಿಂದ ನಿನ್ನ ಭಕ್ತಿಯ ಭಾವವನ್ನು ದೃಢಪಡಿಸುವನು."

ಈ ರೀತಿ ಉಪದೇಶ ಪಡೆದ ಧ್ರುವನು, ನಾರದರು ಹೇಳಿದ ಪ್ರಕಾರ, ಮಧುವನವನ್ನು ಪ್ರವೇಶಿಸಿ ಯಮುನಾನದಿಯಲ್ಲಿ ಸ್ನಾನ ಮಾಡಿದನು. ಆ ರಾತ್ರಿ ಶ್ರದ್ಧೆಯಿಂದ ಉಪವಾಸ ಮಾಡಿದನು. ಏಕಾಗ್ರವಾದ ಮನಸ್ಸಿನಿಂದ ಶ್ರೀಮನ್ನಾರಾಯಣನ ಉಪಾಸನೆಯನ್ನು ಆರಂಭಿಸಿದನು. ಆತನ ಆಹಾರ ನಿಯಮವೂ ಕಟ್ಟುನಿಟ್ಟಾಗಿತ್ತು. ಮೂರು ರಾತ್ರಿಗಳಿಗೆ ಒಮ್ಮೆ ಮಾತ್ರ ಬೇಲದ ಹಣ್ಣು ಮತ್ತು ಬೋರೆ ಹಣ್ಣುಗಳನ್ನು ಸೇವಿಸುವನು. ಅದೂ ಶರೀರಧಾರಣೆಗೆ ಎಷ್ಟು ಬೇಕೋ ಅಷ್ಟು ಮಾತ್ರ. ಹೀಗೆ ಒಂದು ತಿಂಗಳನ್ನು ಕಳೆದನು.

ಎರಡನೆಯ ತಿಂಗಳು, ಆರು ದಿನಕ್ಕೆ ಒಮ್ಮೆ ಮಾತ್ರ ಗಿಡ–ಮರಗಳಿಂದ ಒಣಗಿ ಉದುರಿಹೋದ ಹುಲ್ಲು ಮತ್ತು ಎಲೆಗಳನ್ನು ತಿನ್ನುತ್ತ ಭಗವಂತನನ್ನು ತನ್ನ ತಪಸ್ಸಿನಿಂದ ಆರಾಧಿಸಿದನು. ಮೂರನೆಯ ತಿಂಗಳು ಒಂಬತ್ತು ದಿನಗಳಿಗೆ ಒಮ್ಮೆ ನೀರನ್ನು ಮಾತ್ರ ತೆಗೆದುಕೊಳ್ಳುತ್ತ ಶ್ರೀಮನ್ನಾರಾಯಣನ ಧ್ಯಾನವನ್ನು ಮಾಡುತ್ತಿದ್ದನು. ನಾಲ್ಕನೆಯ ತಿಂಗಳಿನಲ್ಲಿ, ಪ್ರಾಣವಾಯುವನ್ನು ನಿಯಂತ್ರಣಕ್ಕೆ ತೆಗೆದುಕೊಂಡು, ಹನ್ನೆರಡು ದಿನಗಳಿಗೆ ಒಮ್ಮೆಯಂತೆ ವಾಯುವನ್ನು ಮಾತ್ರ ಆಹಾರವಾಗಿ ತೆಗೆದುಕೊಳ್ಳುತ್ತಿದ್ದನು. ಐದನೆಯ ತಿಂಗಳಿನಲ್ಲಿ, ಶ್ವಾಸವನ್ನು ಜಯಿಸಿ, ಪರಬ್ರಹ್ಮನನ್ನೇ ಚಿಂತಿಸುತ್ತ ಒಂಟಿಕಾಲಿನ ಮೇಲೆ ನಿಂತುಕೊಂಡು ಘೋರತಪಸ್ಸನ್ನು ಆಚರಿಸತೊಡಗಿದನು. ಅವನ ದೇಹ ಮೋಟು ಮರದಂತೆ ನಿಶ್ಚಲವಾಗಿದ್ದಿತು. ಆಗ ಅವನು ಶಬ್ದ–ಸ್ಪರ್ಶಾದಿ ರೂಪಗಳಿಂದ ಮನಸ್ಸನ್ನು ಹಿಂತೆಗೆದುಕೊಂಡು, ಶ್ರೀಹರಿಯ ಸ್ವರೂಪದಲ್ಲಿ ನೆಲೆಗೊಳಿಸಿದನು; ಮನಸ್ಸನ್ನು ಬೇರೆಲ್ಲಿಯೂ ಹೋಗಲು ಬಿಡಲಿಲ್ಲ.

### ಭಗವತ್ಪ್ರಕಾಶ

ತನ್ನ ಯೋಗಮಗ್ನ ಬುದ್ಧಿಯಲ್ಲಿ, ಪ್ರಕಾಶಮಾನವಾಗಿ ಮಿಂಚಿನಂತೆ ಹೊಳೆಯುತ್ತಿದ್ದ ಯಾವ ಭಗವನ್ಮೂರ್ತಿಯನ್ನು ಧ್ರುವಕುಮಾರನು ಧ್ಯಾನಮಾಡುತ್ತಿದ್ದನೋ, ಆ ಪರಮಮಂಗಲ ಮೂರ್ತಿಯು ಇದ್ದಕ್ಕಿದ್ದಂತೆಯೇ ಅವನ ಮನಃಪಟಲದಿಂದ ಕಣ್ಮರೆಯಾಗಿ ಹೋಯಿತು. "ಇದೇನು, ಹೀಗಾಗಿ ಹೋಯಿತಲ್ಲ!" ಎಂದು ಅವನು ಕಣ್ಣುತೆರೆದನು. ಯಾವ ಭಗವನ್ಮೂರ್ತಿಯನ್ನು ಅವನು ತನ್ನ ಮನಸ್ಸಿನಲ್ಲಿ ಧ್ಯಾನಮಾಡುತ್ತಿದ್ದನೋ, ಅದೇ ಮೂರ್ತಿಯು ಅವನ ಕಣ್ಣುಗಳ ಮುಂದೆಯೇ ನಿಂತಿತ್ತು. ಪ್ರಭುವನ್ನು ಕಂಡ ಧ್ರುವನಿಗೆ ಭಕ್ತಿ ಸಂಭ್ರಮವಾಯಿತು.



ತವರೊಂದಿಗೆ ಭಯವೂ ಉಂಟಾಯಿತು. ಆತನು ಭೂಮಿಯಲ್ಲಿ ಹೊರಳಾಡುತ್ತ, ಭಗವಂತನಿಗೆ ದೀರ್ಘದಂಡ ಪ್ರಣಾಮವನ್ನು ಮಾಡಿದನು. ನಂತರ ಮೇಲೆದ್ದು ನಿಂತುಕೊಂಡು, ಆ ಸುಂದರಮೂರ್ತಿಯ ಅಪೂರ್ವ ಸೌಂದರ್ಯವನ್ನು ಕಣ್ಣುಗಳಿಂದ ಕುಡಿದುಬಿಡುವಂತೆ, ತುಟಿಯಿಂದ ಮುತ್ತಿಕ್ಕುವಂತೆ, ಭುಜಗಳಿಂದ ಆಲಿಂಗಿಸಿಕೊಂಡಂತೆ, ಪ್ರೇಮಪೂರ್ಣ ದೃಷ್ಟಿಯಿಂದ, ಎವೆಯಿಕ್ಕದ ಕಣ್ಣುಗಳಿಂದ ದಿಟ್ಟಿಸಲಾರಂಭಿಸಿದನು. ಕೈಜೋಡಿಸಿ ಹಾಗೆಯೇ ನಿಂತುಕೊಂಡುಬಿಟ್ಟನು.

## ಭಗವತ್ ಸ್ತುತಿ

ಭಗವಂತನು ಸರ್ವರ ಅಂತರ್ಯಾಮಿಯಲ್ಲವೆ? ಅವನಿಗೆ ತಿಳಿಯಿತು, "ಈ ಬಾಲಕನಿಗೆ ನನ್ನನ್ನು ಸ್ತೋತ್ರಮಾಡಬೇಕೆಂಬ ಇಚ್ಛೆಯಿದೆ. ಆದರೆ, ಹೇಗೆ ಸ್ತೋತ್ರ ಮಾಡಬೇಕು ಎಂದು ತಿಳಿಯದಾಗಿದೆ" ಎಂದು. ಕರುಣೆಯಿಂದ ಆ ಕಂದನ ಕೆನ್ನೆಗಳನ್ನು ತನ್ನ ಶಂಖದಿಂದ ನೇವರಿಸುತ್ತಾನೆ. ಭಗವಂತನ ಪಾಂಚಜನ್ಯ ಶಂಖದ ಸ್ಪರ್ಶವಾದೊಡನೆ, ವೇದಮಯವಾದ ವಾಣಿಯನ್ನಾಡುವಂತಹ ಶಕ್ತಿ ಧ್ರುವನಲ್ಲಿ ಸ್ಫುರಿಸಿತು. ಅವನು ಭಕ್ತಿಭಾವ ಪರಿಪೂರ್ಣನಾಗಿ, ಶ್ರೀಹರಿಯನ್ನು ಹೀಗೆ ಮೆಲ್ಲ ಮೆಲ್ಲನೆ ಸ್ತುತಿಸಲಾರಂಭಿಸಿದನು:

" ಸ್ವಾಮಿಯೇ! ನೀನು ಶಕ್ತಿಧರನು. ನೀನು ನನ್ನೊಳಗೆ ಪ್ರವೇಶ ಮಾಡಿ, ನನ್ನಲ್ಲಿ ಅಂತರ್ಗತವಾಗಿದ್ದ ವಾಣಿಯನ್ನು ನಿನ್ನ ತೇಜಸ್ಸಿನ ಶಕ್ತಿಯಿಂದ ಉದ್ದೀಪನಗೊಳಿಸಿದ್ದೀಯೆ. ಹಾಗೆಯೇ ಕೈ–ಕಾಲು, ಕಿವಿ, ಚರ್ಮ ಮುಂತಾದ ಇತರ ಇಂದ್ರಿಯಗಳಿಗೂ ಪ್ರಾಣಗಳಿಗೂ ಚೈತನ್ಯಪ್ರದನಾಗಿದ್ದೀಯೆ. ಹೀಗೆ ನನ್ನೊಳಗಿನ ಅಂತರ್ಯಾಮಿ ಪುರುಷನಾದ ಪ್ರಭೋ, ನಿನಗೆ ನಮೋ ನಮಃ."

" ಪರಮಾತ್ಮ, ನೀನು ಒಬ್ಬನೇ. ಆದರೂ ಅನಂತಗುಣವುಳ್ಳ ನಿನ್ನ ಅಧೀನವಾದ ಮಾಯಾಶಕ್ತಿಯಿಂದ ಈ ಸಮಸ್ತ ಪ್ರಪಂಚವನ್ನು ಸೃಷ್ಟಿಮಾಡಿ, ಅಂತರ್ಯಾಮಿಯಾಗಿ ಅದರ ಒಳಹೊಕ್ಕಿದ್ದೀಯೆ. ಒಂದೇ ಅಗ್ನಿಯು ಬೇರೆ ಬೇರೆ ಕಟ್ಟಿಗೆಗಳಲ್ಲಿ ಕಾಣಿಸಿಕೊಳ್ಳುವಂತೆ, ಬಗೆಬಗೆಯ ಇಂದ್ರಿಯಗಳಲ್ಲಿ ನೀನು ಅನೇಕರೂಪವಾಗಿ ಕಾಣಿಸಿಕೊಳ್ಳುತ್ತಿರುವೆ."

"ಪ್ರಭೂ, ನಿನ್ನ ಚರಣಕಮಲಗಳ ಧ್ಯಾನ ಮತ್ತು ನಿನ್ನ ಭಕ್ತರ ಚರಿತ್ರೆಯನ್ನು ಕೇಳುವುದರಿಂದ ದೊರಕುವ ಆನಂದವು ಬ್ರಹ್ಮಾನಂದದಲ್ಲೂ ದೊರಕದು. ಆದ್ದರಿಂದ, ಓ ಅನಂತನೇ, ನಿನ್ನಲ್ಲಿ ಎಡೆಬಿಡದೆ ಭಕ್ತಿಪ್ರವಾಹವನ್ನು ಹರಿಸುತ್ತಿರುವ, ಶುದ್ಧಹೃದಯದವರಾದ, ಭಕ್ತರ ಸಂಗವನ್ನು ನನಗೆ ಅನುಗ್ರಹಿಸು. ಅವರ ಸಹವಾಸದಲ್ಲಿದ್ದುಕೊಂಡು, ನಾನು ನಿನ್ನ ಗುಣಕಥನವೆಂಬ ಅಮೃತವನ್ನು ಪಾನಮಾಡಿ ಮತ್ತನಾಗುತ್ತೇನೆ. ಆ ಮೂಲಕ ಸಂಸಾರಸಾಗರವನ್ನು ದಾಟುತ್ತೇನೆ."

"ಓ ಪದ್ಮನಾಭ! ನಿನ್ನ ಪಾದಾರವಿಂದಗಳ ಸುಗಂಧದಲ್ಲಿ ಮಾತ್ರವೇ ಆಶೆಯಿಟ್ಟಿರುವ ಮಹಾನುಭಾವರಾದ ಭಕ್ತರಿಗೆ ಬೇರೇನೂ ಜ್ಞಾಪಕದಲ್ಲಿರುವುದಿಲ್ಲ. ಅವರು ತಮಗೆ ಅತ್ಯಂತಪ್ರಿಯವಾದ ದೇಹವನ್ನೂ, ದೇಹ ಸಂಬಂಧಿಗಳಾದ ಮನೆ, ಮಡದಿ, ಮಕ್ಕಳು ಮತ್ತು ಮಿತ್ರರನ್ನೂ ಮರೆತುಬಿಡುವರು. ಹೀಗೆ ಎಲ್ಲವನ್ನೂ ಮರೆಯುವಂತೆ ಮಾಡುವ ನಿನ್ನ ದಿವ್ಯಚರಿತಾಮೃತದಲ್ಲಿ ಅದೆಂತಹ ಆಕರ್ಷಣೆ, ಎಂತಹ ಮಾದಕತೆ ಇರಬೇಕು!"

## ಭಗವದನುಗ್ರಹ

ಧ್ರುವನ ಈ ಪ್ರಾರ್ಥನೆಯಿಂದ ಭಗವಂತನು ಸುಪ್ರೀತನಾದನು. " ರಾಜಕುಮಾರ, ನಿನ್ನ ಮನಸ್ಸಿನ ಕೋರಿಕೆ ನನಗೆ ಗೊತ್ತು. ಅದನ್ನು ಪಡೆಯುವುದು ಬಹಳ ಕಷ್ಟ. ಆದರೂ ನಿನಗೆ ನಾನು ಅದನ್ನು ಕೊಡುತ್ತೇನೆ. ನಿನಗೆ ಮಂಗಳವಾಗಲಿ. ನಿನಗೆ ಉನ್ನತವಾದ ಧ್ರುವನಕ್ಷತ್ರಪದವಿಯನ್ನು ಕೊಡುತ್ತೇನೆ. ನಿನ್ನ ತಂದೆಯ ರಾಜ್ಯವನ್ನು ನೀನು ಆಳುವೆ. ನಂತರ, ನನ್ನ ನಿಜಧಾಮಕ್ಕೆ ಬಂದು ಸೇರುವೆ" ಎಂದು ಹೇಳಿದನು.

ಹೀಗೆ ಬಾಲಕ ಧ್ರುವನು ಭಗವಂತನಿಂದ ಅನುಗೃಹೀತನಾದನು. ತನ್ನ ನಗರಕ್ಕೆ ಅವನು ಮರಳಿಹೋದನು. ಆದರೂ ಮನಸ್ಸಿಗೆ ಸಮಾಧಾನವಿರಲಿಲ್ಲ. ಭಗವಂತನು ವರಕೊಡಲು ಬಂದಾಗ, ಮುಕ್ತಿಯ ವರವನ್ನು ಬೇಡಲಿಲ್ಲವಲ್ಲಾ ಎಂಬ ಪಶ್ಚಾತ್ತಾಪ ಅವನಿಗುಂಟಾಗಿತ್ತು. ತಾನು ಕೃತಕೃತ್ಯನಲ್ಲವೆಂಬ ಭಾವನೆ ಮೂಡಿತ್ತು. ಬಹಳ ವರ್ಷಗಳ ಕಾಲ ಅವನು ಭೂಮಿಯನ್ನು ಆಳಿದನು. "ವಿಶ್ವವೆಲ್ಲವೂ ಭಗವಂತನ ಮಾಯೆಯಿಂದ ರಚಿತವಾಗಿದೆ" ಎಂದುಕೊಂಡು ವೈರಾಗ್ಯ ತಳೆದು, ಎಲ್ಲವನ್ನೂ ತ್ಯಜಿಸಿ, ಬದರಿಕಾಶ್ರಮಕ್ಕೆ ಹೋದನು. ಅಲ್ಲಿ ಇಂದ್ರಿಯಗಳನ್ನು, ಪ್ರಾಣವನ್ನು ವಶಮಾಡಿಕೊಂಡು ಭಗವದ್ರೂಪದಲ್ಲಿ ಮನಸ್ಸನ್ನು ಸ್ಥಿರಗೊಳಿಸಿದನು. ಅದನ್ನೇ ಚಿಂತಿಸುತ್ತ ಸಮಾಧಿಸಿದ್ಧಿಯನ್ನು ಪಡೆದನು. ಆತನ ಅಂತರಂಗದಲ್ಲಿ ಹರಿಯ ಬಗೆಗಿನ ಭಕ್ತಿಪ್ರವಾಹ ನಿರಂತರವಾಗಿ ಹರಿದು, ಆತನ ಕಣ್ಣುಗಳಿಂದ ಆನಂದಬಾಷ್ಪಗಳು ಧಾರೆಧಾರೆಯಾಗಿ ಸುರಿಯತೊಡಗಿದವು. ದೇಹಾಭಿಮಾನವು ಸಂಪೂರ್ಣವಾಗಿ ಕರಗಿ ಹೋಗಿ ತನ್ನ ನೆನಪೂ ಅವನಿಗೆ ಮರೆತು ಹೋಯಿತು. ನಂತರ, ಅವನು ಭಗವಂತನ ಧಾಮಕ್ಕೆ ಹೋದನು.

**ಧ್ರುವನ ಕಥೆ ಸಾಧುಸಜ್ಜನರು ತುಂಬು ಮನಸ್ಸಿನಿಂದ ಕೊಂಡಾಡುವ ಪವಿತ್ರ ಕಥೆ. ಯಾರು ಈ ಪವಿತ್ರವಾದ ಚರಿತ್ರೆಯನ್ನು ಕೇಳುವರೋ ಅವರಿಗೆ ಭಕ್ತಿ, ಶೀಲ ಮುಂತಾದ ಉತ್ತಮ ಗುಣಗಳು ಲಭಿಸುತ್ತವೆ.**

**(ಆಧಾರ:** ***ಶ್ರೀಮದ್ ಭಾಗವತ, ಮೂರನೆಯ ಸ್ಕಂಧ*****)**